ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.in
e-mail : hosakote.pa@gmail.com

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ.) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಸಿ.ಸಿ./284/2022–23

ದಿನಾಂಕ: 23.03.2023

## ಪ್ರಾರಂಭಿಕ ಪ್ರಮಾಣ ಪತ್ರ/ Commencement Certificate

**ವಿಷಯ :** ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಪೆತ್ತನಹಳ್ಳಿ ಗ್ರಾಮದ ಸ. ನಂ. 101/4, 101/5, 101/7 ಮತ್ತು 101/8 ರಲ್ಲಿನ ಒಟ್ಟು 01 ಎಕರೆ 04 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದ್ದು, ಸದರಿ ಜಮೀನುಗಳಿಗೆ ದೊಡ್ಡಗಟ್ಟಿಗನಬ್ಬೆ ಗ್ರಾಮಪಂಚಾಯಿತಿ ವ್ಯಾಪ್ತಿಯ ಖಾತಾ ಸಂಖ್ಯೆ: 148/101/5; 149/101/8; 150/101/4 151/101/7 (ಸ್ವತ್ತಿನ ಸಂಖ್ಯೆ: 150300401000320217) ರಲ್ಲಿ ವಸತಿ ಕಟ್ಟಡ ನಕ್ಷೆಗೆ (ವಸತಿ ಸಮುಚ್ಚಯ) ಅನುಮೋದನೆ ನೀಡುವ ಬಗ್ಗೆ.

**ಉಲ್ಲೇಖ:**

1. ಈ ಕಛೇರಿಯ ಮಂಜೂರಾತಿ ಆದೇಶ ಸಂಖ್ಯೆ: ಹೊಯೋಪ್ರಾ/ಎಲ್.ಎ.ಓ./31/2022–23, ದಿನಾಂಕ: 16.02.2023.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಗಟ್ಟಿಗನಬ್ಬೆ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು ರವರ ಪತ್ರ ಸಂಖ್ಯೆ: ದೊ.ಗ್ರಾ.ಪಂ/147/2022–23, ದಿನಾಂಕ: 09.03.2023.
3. ಈ ಕಛೇರಿ ಸಮ ಸಂಖ್ಯೆ ಪತ್ರ ದಿನಾಂಕ: 16.03.2023.
4. ಅರ್ಜಿದಾರರು ಪ್ರಾಧಿಕಾರಕ್ಕೆ ಶುಲ್ಕ ಪಾವತಿಸಿದ ಕುರಿತು ಮನವಿ ದಿನಾಂಕ: 21.03.2023 ರೊಂದಿಗೆ Federal Bank, Thirumalashettyhalli Branch ರಲ್ಲಿನ ಡಿ.ಡಿ.ನಂ. 630481 & 630482, ದಿನಾಂಕ: 20.03.2023, ರೂ. 7,90,000/– ಮತ್ತು 13,000/– (ಒಟ್ಟು ರೂ. 8,03,000/–).

***

**ಪ್ರಸ್ತಾವನೆ:–**

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರಲ್ಲಿ ಪ್ರಸ್ತಾಪಿತ ಪೆತ್ತನಹಳ್ಳಿ ಗ್ರಾಮದ ಸ. ನಂ. 101/4, 101/5, 101/7 ಮತ್ತು 101/8 ರಲ್ಲಿನ ಒಟ್ಟು 01 ಎಕರೆ 04 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿರುತ್ತದೆ. ಸದರಿ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ದೊಡ್ಡಗಟ್ಟಿಗನಬ್ಬೆ ಗ್ರಾಮಪಂಚಾಯಿತಿ ವ್ಯಾಪ್ತಿಯ ಖಾತಾ ಸಂಖ್ಯೆ: 148/101/5; 149/101/8; 150/101/4 151/101/7 (ಸ್ವತ್ತಿನ ಸಂಖ್ಯೆ: 150300401000320217) ರಂತೆ ಖಾತೆ ತೆರೆಯಲಾಗಿದ್ದು, ಸದರಿ ಖಾತಾ ಸ್ವತ್ತಿನಲ್ಲಿ ವಸತಿ ಕಟ್ಟಡ ನಕ್ಷೆಗೆ (ವಸತಿ ಸಮುಚ್ಚಯ) ಅನುಮೋದನೆ ನೀಡಲು ಉಲ್ಲೇಖ (2) ರಲ್ಲಿ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಸಲ್ಲಿಸಲಾದ ಕಟ್ಟಡ ನಕ್ಷೆಗಳನ್ನು ಪರಿಶೀಲಿಸಲಾಗಿ, ಸದರಿ ನಕ್ಷೆಗಳಲ್ಲಿ ಬೇಸ್‌ಮೆಂಟ್ + ನೆಲ ಮತ್ತು 04 ಅಂತಸ್ತುಗಳ (Basement+G+04 Floors) ವಸತಿ ಕಟ್ಟಡವನ್ನು ಒಳಗೊಂಡ ಒಟ್ಟು 75 ವಸತಿ ಘಟಕಗಳನ್ನು ಪ್ರಸ್ತಾಪಿಸಲಾಗಿದೆ.



Scanned with OKEN Scanner

ಅದರಂತೆ, ಉಲ್ಲೇಖ (3) ರಲ್ಲಿ ನಿಗದಿತ ಶುಲ್ಕವನ್ನು ಪಾವತಿಸುವಂತೆ ತಿಳಿಸಲಾಗಿದ್ದು, ಉಲ್ಲೇಖ (4) ರಲ್ಲಿ ಅರ್ಜಿದಾರರು ಶುಲ್ಕವನ್ನು ಈ ಪ್ರಾಧಿಕಾರಕ್ಕೆ ಪಾವತಿಸಿರುತ್ತಾರೆ.

ಸದರಿ ನಿವೇಶನಕ್ಕೆ ಹಾಲಿ 14.80 ಮೀ. ಅಗಲದ ರಸ್ತೆಯನ್ನು 18.00 ಮೀ. ಅಗಲಕ್ಕೆ ಅಗಲೀಕರಿಸಲು ಕಾಯ್ದಿರಿಸಲಾಗಿದ್ದು, ಸದರಿ ಕಟ್ಟಡ ನಕ್ಷೆಗಳು ಅನುಮೋದಿತ ವಲಯ ನಿಯಮಾವಳಿಗಳಿಗೆ ಅನುಗುಣವಾಗಿರುತ್ತದೆ. ಆದ್ದರಿಂದ, ಮೇಲೆ ವಿವರಿಸಿರುವ ಅಂಶಗಳ ಮೇರೆಗೆ ಬೇಸ್‌ಮೆಂಟ್+ನೆಲ ಮತ್ತು 04 ಅಂತಸ್ತುಗಳ (Basement+ G−04 Floors) ವಸತಿ ಕಟ್ಟಡ ನಕ್ಷೆಗೆ ತಾಂತ್ರಿಕ ಅನುಮೋದನೆ ನೀಡುವ ಸಂಬಂಧ ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

<u>ಆದೇಶ ಸಂಖ್ಯೆ: ಹೊಯೋಪ್ರಾ/ಸಿ.ಸಿ./284/2022−23, ದಿನಾಂಕ : 23.03.2023</u>

ಹೊಸಕೋಟೆ ತಾಲ್ಲೂಕು, ಕಸಬಾ ಹೋಬಳಿ, ಪೆತ್ತನಹಳ್ಳಿ ಗ್ರಾಮದ ಸ. ನಂ. 101/4, 101/5, 101/7 ಮತ್ತು 101/8 ರಲ್ಲಿನ ಒಟ್ಟು 01 ಎಕರೆ 04 ಗುಂಟೆ ವಿಸ್ತೀರ್ಣದ ಜಮೀನುಗಳಿಗೆ ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಿದ್ದು, ಸದರಿ ಜಮೀನುಗಳಿಗೆ ದೊಡ್ಡಗಟ್ಟಿಗನಬ್ಬೆ ಗ್ರಾಮಪಂಚಾಯಿತಿ ವ್ಯಾಪ್ತಿಯ ಖಾತಾ ಸಂಖ್ಯೆ: 148/101/5; 149/101/8; 150/101/4 151/101/7 (ಸ್ವತ್ತಿನ ಸಂಖ್ಯೆ: 150300401000320217) ರಲ್ಲಿ ವಸತಿ (ಸಮುಚ್ಚಯ) ಕಟ್ಟಡ ನಕ್ಷೆಗೆ ಅಂದರೆ ಬೇಸ್‌ಮೆಂಟ್+ನೆಲ ಮತ್ತು 04 ಅಂತಸ್ತುಗಳ (Basement+G+04 Floors) ವಸತಿ ಕಟ್ಟಡವನ್ನು ಒಳಗೊಂಡ ಒಟ್ಟು 75 ವಸತಿ ಘಟಕಗಳ ಕಟ್ಟಡ ನಕ್ಷೆಗೆ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ಕಲಂ 15 ರನ್ವಯ ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು ಕಾರ್ಯರೂಪಕ್ಕೆ ತರಲು ತಾಂತ್ರಿಕ ಅನುಮೋದನೆ ನೀಡಲಾಗಿದೆ.

**ಷರತ್ತುಗಳು:**

1. ಈಗ ನೀಡಿರುವ ಕಟ್ಟಡ ನಕ್ಷೆ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಅಂದರೆ ದಿನಾಂಕ: 23.03.2023 ರಿಂದ ದಿನಾಂಕ: 22.03.2025 ರವರೆಗೆ ಜಾರಿಯಲ್ಲಿರುತ್ತದೆ. ಈ ಅವಧಿಯಲ್ಲಿ ಕಟ್ಟಡ ಅಭಿವೃದ್ಧಿ ಕಾರ್ಯ ಪೂರ್ಣಗೊಳ್ಳದಿದ್ದಲ್ಲಿ, ಅನುಮತಿಯನ್ನು ನವೀಕರಿಸಿಕೊಳ್ಳತಕ್ಕದ್ದು.
2. ಅನುಮೋದಿತ ವಸತಿ ಉದ್ದೇಶದ ಅಭಿವೃದ್ಧಿ ಯೋಜನೆಯಲ್ಲಿ ಪ್ರಸ್ತಾವಿಸಲಾದ ಕಟ್ಟಡ ನಕ್ಷೆಗೆ ಅನುಗುಣವಾಗಿ ಹಾಗೂ ಈ ಪ್ರಾಧಿಕಾರದಿಂದ ನೀಡಲಾದ ಅನುಮೋದನೆಯಂತೆ ಕಟ್ಟಡವನ್ನು ನಿರ್ಮಿಸತಕ್ಕದ್ದು. ಕಟ್ಟಡ ಕಾಮಗಾರಿ ಪೂರ್ಣಗೊಂಡ ನಂತರ ಈ ಕಛೇರಿಗೆ ಮಾಹಿತಿ ನೀಡತಕ್ಕದ್ದು.
3. ನಿವೇಶನದಲ್ಲಿ ಯಾವುದೇ ಅಭಿವೃದ್ಧಿ ಕಾರ್ಯ ಕೈಗೊಳ್ಳುವ ಮೊದಲು ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಾದ ಪಂಚಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಗಟ್ಟಿಗನಬ್ಬೆ ಗ್ರಾಮಪಂಚಾಯಿತಿ, ಹೊಸಕೋಟೆ ತಾಲ್ಲೂಕು ವತಿಯಿಂದ ಪರವಾನಗಿ ಪಡೆಯತಕ್ಕದ್ದು.
4. ಇತರೇ ಇಲಾಖೆಗಳಿಂದ ಪಡೆದಿರುವ ನಿರಾಕ್ಷೇಪಣಾ ಪತ್ರಗಳಲ್ಲಿನ ನಿಬಂಧನೆ/ಷರತ್ತು ಹಾಗೂ ಇತರೇ ಅಂಶಗಳನ್ನು ತಪ್ಪದೇ ಪಾಲಿಸತಕ್ಕದ್ದು.
5. **ಸದರಿ ಜಮೀನಿನಲ್ಲಿ / ನಿವೇಶನದಲ್ಲಿ ವಸತಿ ಕಟ್ಟಡ ಕಾಮಗಾರಿ ಕೈಗೊಳ್ಳುವ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯವರ Consent Order No. CTE-122861, PCB ID 151436, ದಿನಾಂಕ: 08.03.2023 ರನ್ವಯ ವಿಧಿಸಿರುವ ಎಲ್ಲಾ ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.**



Scanned with OKEN Scanner

. ದೂರವಾಣಿ / ಫ್ಯಾಕ್ಸ್ : 080-2793 4470
080-2793 5412

URL : www.hoskote.tpa.gov.i
e-mail : hosakote.pa@gmail.cor

# ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ - 562 114, ಬೆಂಗಳೂರು (ಗ್ರಾ) ಜಿಲ್ಲೆ.

ಸಂಖ್ಯೆ: ಹೊಯೋಪ್ರಾ/ಸಿ.ಸಿ./284/2022–23 ದಿನಾಂಕ: 23.03.2023

6. ಸದರಿ ಯೋಜನೆಯಲ್ಲಿನ ವಸತಿ ಘಟಕಗಳಿಗೆ ಮೂಲ ಸೌಲಭ್ಯವಾದ ಅಗತ್ಯ ನೀರು ಪೂರೈಕೆ ಬಗ್ಗೆ ದೊಡ್ಡಗಟ್ಟಿಗನಬ್ಬೆ ಗ್ರಾಮಪಂಚಾಯಿತಿ ರವರು ನೀಡಿರುವ ಪತ್ರ ಸಂಖ್ಯೆ: ದೊ.ಗ್ರಾ.ಪಂ 147/2022–23, ದಿನಾಂಕ: 09.03.2023 ರಂತೆ ಅಗತ್ಯ ಕ್ರಮ ಜರುಗಿಸಿ ನೀರು ಪೂರೈಕೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳುವುದು ಹಾಗೂ ಇತರೆ ಮೂಲಗಳಿಂದಲೂ ನೀರು ಪೂರೈಕೆಗೆ ಕ್ರಮ ಜರುಗಿಸುವುದು. ಸದರಿ **ಸ್ಥಳೀಯ ಸಂಸ್ಥೆಯಿಂದ ಪ್ರಸ್ತಾಪಿತ ವಸತಿ ಕಟ್ಟಡಕ್ಕೆ ನೀರನ್ನು ಒದಗಿಸದೇ ಇದ್ದಲ್ಲಿ, ಈ ಬಗ್ಗೆ ಅಭಿವೃದ್ಧಿದಾರರು / ಜಮೀನಿನ ಮಾಲೀಕರು ತಮ್ಮ ಸ್ವಂತ ಖರ್ಚಿನಲ್ಲಿ ನೀರು ಪೂರೈಕೆಗೆ ಅಗತ್ಯ ಕ್ರಮವನ್ನು ಕೈಗೊಳ್ಳುವ ನಿಬಂಧನೆಗೆ ಒಳಪಟ್ಟಿರುತ್ತದೆ.**
7. ಸದರಿ ಜಮೀನಿನಲ್ಲಿ ಪ್ರಸ್ತಾಪಿಸಿರುವ ಕಟ್ಟಡಗಳ ನಿರ್ಮಾಣ ಸಂಬಂಧ ದಿನಾಂಕ: 21.03.2023 ರಂದು ಸಲ್ಲಿಸಿರುವ **CG ASSICIATES** ರವರ ಸ್ಥಿರತೆ ಪ್ರಮಾಣ ಪತ್ರ (Structural Stability Certificate) ದಲ್ಲಿ ತಿಳಿಸಿರುವಂತೆ ಅವರ ಮೇಲ್ವಿಚಾರಣೆಯಲ್ಲಿ ಹಾಗೂ ನಿಯಮಗಳಂತೆ ಕಟ್ಟಡಗಳನ್ನು ನಿರ್ಮಿಸತಕ್ಕದ್ದು ಹಾಗೂ ಸದರಿ ಕಟ್ಟಡದ ಗುಣಮಟ್ಟಕ್ಕೆ ಅರ್ಜಿದಾರರು/ಅಭಿವೃದ್ಧಿದಾರರು ಹಾಗೂ Structural Stability Certificate ನೀಡಿದ ಇಂಜಿನಿಯರ್ ರವರು ಹೊಣೆಗಾರರಾಗಿರುತ್ತಾರೆ. ಈ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
8. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ಕಟ್ಟಡ ನಕ್ಷೆಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು.
9. ಈ ನಿವೇಶನದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಹಾಗೂ ಹೊಸ ಸಸ್ಯಗಳನ್ನು ಬೆಳೆಸುವುದು.
10. ಸೋಲಾರ್ ವಾಟರ್ ಹೀಟರ್ ಅನ್ನು ಕಟ್ಟಡಗಳಲ್ಲಿ ಕಡ್ಡಾಯವಾಗಿ ಅಳವಡಿಸತಕ್ಕದ್ದು.
11. ಸದರಿ ನಿವೇಶನದಲ್ಲಿ ಮಳೆ ನೀರು ಸಂಗ್ರಹಣಾ ಪದ್ಧತಿಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ಅಂತರ್ ಜಲವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
12. ಕಟ್ಟಡದ ನಿರ್ಮಾಣ ಕಾರ್ಯಕ್ಕೆ ಬಾಲ ಕಾರ್ಮಿಕರನ್ನು ಬಳಸುವುದನ್ನು ನಿಷೇಧಿಸಲಾಗಿದೆ ಹಾಗೂ ಕಾರ್ಮಿಕ ಇಲಾಖೆಯ ಕಾಯ್ದೆ ಮತ್ತು ಆದೇಶಗಳಾನುಸಾರ ವಿಧಿಸಿರುವ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು. ಕಟ್ಟಡ ನಿರ್ಮಾಣದ ಕಾಮಗಾರಿ ಸಂದರ್ಭದಲ್ಲಿ ಕಾರ್ಮಿಕರಿಗೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಮತ್ತು ಎಲ್ಲಾ ರೀತಿಯ ಸುರಕ್ಷತಾ ವ್ಯವಸ್ಥೆಯನ್ನು ಒದಗಿಸತಕ್ಕದ್ದು.
13. ಕಟ್ಟಡ ನಿರ್ಮಾಣ ಸಾಮಗ್ರಿಗಳನ್ನು ರಸ್ತೆ, ಪಾದಚಾರಿ ಮಾರ್ಗಗಳಲ್ಲಿ ಶೇಖರಣೆ ಮಾಡಬಾರದು.
14. ಕಟ್ಟಡ ನಡು ಜಾಗ ಪ್ರದೇಶದ ಅಂಚಿನಲ್ಲಿ ಗಿಡ ಮರಗಳನ್ನು ಬೆಳೆಸತಕ್ಕದ್ದು.
15. ಒಂದು ಅನುಮೋದಿತ ಕಟ್ಟಡ ನಕ್ಷೆಯನ್ನು ಕಟ್ಟಡ ನಿರ್ಮಾಣ ಸ್ಥಳದಲ್ಲಿ ಅಧಿಕಾರಿಗಳ ಸಮೀಕ್ಷೆಗಾಗಿ ಪ್ರದರ್ಶಿಸತಕ್ಕದ್ದು.
16. ಸದರಿ ಪ್ರಸ್ತಾಪಿತ ಜಮೀನಿನಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರ/ಇತರೆ ಸರ್ಕಾರಿ ಇಲಾಖೆಗಳ ಜಮೀನುಗಳು/ಅನ್ಯ ಖಾಸಗಿ ಜಮೀನುಗಳೇನಾದರೂ ಸೇರಿಕೊಂಡಿರುವುದು ತಿಳಿದುಬಂದಲ್ಲಿ ಹಾಗೂ ಖರಾಬು ಜಮೀನುಗಳ ಅಳತೆಗಳು ಮತ್ತು ಅವುಗಳ ವಾಸ್ತವಿಕ ಸ್ಥಳಗಳ ವ್ಯತ್ಯಾಸ ಕಂಡುಬಂದಂತಹ ಸಂದರ್ಭದಲ್ಲಿ ಹೊಸಕೋಟೆ ಯೋಜನಾ ಪ್ರಾಧಿಕಾರವು ಅನುಮೋದಿತ ವಸತಿ ಉದ್ದೇಶದ ಏಕ ನಿವೇಶನ ನಕ್ಷೆಯನ್ನು/ಕಟ್ಟಡ ನಕ್ಷೆಯನ್ನು ಮಾರ್ಪಾಡು ಮಾಡಲು ಅಥವಾ ಹಿಂತೆಗೆದುಕೊಳ್ಳಲು ಸಂಪೂರ್ಣ ಅಧಿಕಾರ ಹೊಂದಿರುತ್ತದೆ.



Scanned with OKEN Scanner

17. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಉಪಯೋಗಿಸಲು ಬರುವುದಿಲ್ಲ.
18. ಸದರಿ ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗಿರುವುದಿಲ್ಲ.
19. ಸದರಿ ಕಟ್ಟಡದಲ್ಲಿ ವಿಕಲಚೇತನ ಸ್ನೇಹಿ ಸೌಲಭ್ಯಗಳನ್ನು ಒದಗಿಸಲು ಕ್ರಮ ಕೈಗೊಳ್ಳುವುದು.
20. ನೈಸರ್ಗಿಕವಾಗಿ ಹರಿಯುವ ನದಿ/ ಹಳ್ಳ /ಕೆರೆ ಮುಂತಾದವುಗಳಿಗೆ ಯಾವುದೇ ಮಲಿನ ನೀರನ್ನು ಬಿಡಬಾರದು.
21. ಶೌಚಕ್ಕೆ ಬಳಸುವ ತ್ಯಾಜ್ಯ ನೀರನ್ನು "ಮರುಬಳಕೆ ಮಾನದಂಡ" ಕ್ಕನುಗುಣವಾಗಿ ಸಂಸ್ಕರಿಸಿದ ನಂತರ ಬಳಸುವುದು.
22. ಸಂಸ್ಕರಿತ ತ್ಯಾಜ್ಯ ನೀರನ್ನು ನಿವೇಶನದಲ್ಲಿನ ಉದ್ಯಾನವನಕ್ಕೆ ಬಳಸುವುದು.
23. ಕಟ್ಟಡ ನಿರ್ಮಾಣ ಸಂದರ್ಭದಲ್ಲಿ ಹಾಗೂ ಸ್ಥಳದಲ್ಲಿ ಉತ್ತಮ ತಾಂತ್ರಿಕತೆಯುಳ್ಳ ಕಡಿಮೆ ಹೊಗೆ ಹೊರಸೂಸುವ ಯಂತ್ರಗಳನ್ನು ಬಳಸತಕ್ಕದ್ದು.
24. ಸರ್ಕಾರದ ನಿರ್ದೇಶನದ ಮೇರೆಗೆ ಇನ್ನಾವುದೇ ಶುಲ್ಕಗಳನ್ನು ತುಂಬಲು ಪ್ರಾಧಿಕಾರವು ಸೂಚನೆ ನೀಡಿದಲ್ಲಿ ಅರ್ಜಿದಾರರು ಅಂತಹ ಶುಲ್ಕವನ್ನು ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು.
25. ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961 ರ ವಿಧಿ 15 ರಂತೆ ಕ್ರಮ ಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶ ಇರುವುದನ್ನು ನಿಮ್ಮ ಗಮನಕ್ಕೆ ತರಲಾಗಿದೆ.
26. ಪ್ರಾಧಿಕಾರವು ವಿಧಿಸುವ ಇನ್ನಾವುದೇ ಷರತ್ತುಗಳಿಗೆ ಬದ್ಧವಾಗಿರತಕ್ಕದ್ದು.
27. ಮೇಲ್ಕಂಡ ಯಾವುದೇ ಷರತ್ತುಗಳನ್ನು ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ಮಂಜೂರಾತಿಯು ಕೂಡಲೇ ರದ್ದಾಗುವುದು.
28. **ಅರ್ಜಿದಾರರು ಸಲ್ಲಿಸಿರುವ ದಾಖಲಾತಿಗಳನ್ವಯ ಈ ಅನುಮತಿಯನ್ನು ನೀಡಲಾಗಿದ್ದು, ವಸತಿ ಕಟ್ಟಡ ನಕ್ಷೆಗೆ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಸತಿ ಕಟ್ಟಡ ನಕ್ಷೆಗೆ ನೀಡಿರುವ ಅಂಗೀಕಾರ ತಾನಾಗಿಯೇ ರದ್ದುಗೊಳ್ಳುತ್ತದೆ.**

ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

**ಪ್ರತಿಗಳನ್ನು :**

1. ಕಾರ್ಯದರ್ಶಿಗಳು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ನಂ. 1/14, 2ನೇ ಮಹಡಿ, ಸಿಲ್ವರ್ ಜ್ಯುಬಿಲಿ ಬ್ಲಾಕ್, ಯೂನಿಟಿ ಬಿಲ್ಡಿಂಗ್, ಸಿ.ಎಸ್.ಐ. ಕಾಂಪೌಂಡ್, 3ನೇ ಅಡ್ಡ ರಸ್ತೆ, ಮಿಷನ್ ರಸ್ತೆ, ಬೆಂಗಳೂರು-27 ಇವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ದೊಡ್ಡಗಟ್ಟಿಗನಬ್ಬೆ ಗ್ರಾಮಪಂಚಾಯಿತಿ, ಕಸಬಾ ಹೋಬಳಿ, ಹೊಸಕೋಟೆ ತಾಲ್ಲೂಕು. } ಇವರಿಗೆ ಕಟ್ಟಡ ನಕ್ಷೆಯ ನಾಲ್ಕು ಪ್ರತಿಗಳೊಂದಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಶ್ರೀ ವಿ. ಗೋಪಾಲಕೃಷ್ಣ ಮತ್ತು ಇತರರು, ನಂ. 136, ತೂಬರಹಳ್ಳಿ ಗ್ರಾಮ, ವರ್ತೂರು ಮುಖ್ಯ ರಸ್ತೆ, ವೈಟ್ ಫೀಲ್ಡ್, ಬೆಂಗಳೂರು-560 066 ರವರ ಮಾಹಿತಿಗಾಗಿ ಕಳುಹಿಸಿದೆ.
4. ಕಛೇರಿ ಪ್ರತಿ.



Scanned with OKEN Scanner